

ಕಳೆದ ನಾಲ್ಕು ತಿಂಗಳುಗಳಿಂದ ಪ್ರಕಟಗೊಳ್ಳುತ್ತಿರುವ ‘ಕಾವ್ಯ ಜೂಟಾಟ’ ಐದನೇ ಕಂತಿನೊಂದಿಗೆ ಕೊನೆಗೊಳ್ಳುತ್ತಿದೆ. ರೂಪಕವೊಂದನ್ನು ಭಿನ್ನ ಆಯಾಮ–ಮನೋಧರ್ಮದಲ್ಲಿ ಶೋಧಿಸುವ ಹಂಬಲದ ಈ ಜೂಟಾಟ – ಆರಿಫ್ ರಾಜಾ, ಕಾವ್ಯಾ ಕಡಮೆ, ಎಚ್.ಆರ್. ರಮೇಶ, ರಮೇಶ ಅರೋಲಿ ಅವರನ್ನು ದಾಟಿ ಬಂದು ಈಗ ಹಿರಿಯ ವಿಮರ್ಶಕ–ಕವಿ ಕೆ. ಫಣಿರಾಜ್ ಮೂಲಕ ತಾರ್ಕಿಕ ಬಿಂದುವನ್ನು ತಲುಪಿದೆ. ಈ ಹುಡುಕಾಟ ಸಹೃದಯರ ಮನಸ್ಸಿನೊಳಗೆ ಮುಂದುವರೆಯುತ್ತದೆ ಎನ್ನುವ ನಂಬಿಕೆ, ಮುಂದುವರೆಯಲಿ ಎನ್ನುವ ಆಶಯ ‘ಮಯೂರ ಬಳಗ’ದ್ದು. ಐವರು ಕವಿಗಳು ಸೇರಿ ಆಡಿದ ‘ಕಾವ್ಯ ಜೂಟಾಟ’ ಆಟ–ಪ್ರಯೋಗದ ಬಗ್ಗೆ ಪ್ರತಿಕ್ರಿಯೆಗಳಿಗೆ ಸ್ವಾಗತ.

–ಸಂಪಾದಕ

editormy@mayura.co.in

ನಿದ್ದೆಯಲ್ಲಿ ಕೆರೆದು ಕೆರೆದು ಗಾಯ
ಮಾಡಿಕೊಳ್ಳುವಳು ಎಂದು
ಸದಾ ತಾನೆ ಉಗುರು ಕತ್ತರಿಸುವ
ತಂದೆ, ಮಗಳು ಜಾತಿ ಹೊರಗೆ
ಪ್ರೀತಿಸಿದಳೆಂದು ಸುಪಾರಿ ಕೊಟ್ಟು
‘ಅಯ್ಯೋ! ಎಷ್ಟು ಜತನ ಮಾಡಿದ್ದ
ಕೂಸೇ ಮಾರಿಯಾಯ್ತು’
ಯಾಕೆ? ಎಂದು ಕೇಳುವನು

ಹಿಚ್‌ಕಾಕ್ ಸಿನೆಮಾಗಳಲ್ಲಿ ಹತ್ಯೆ
ನಮೂನೆಗಳೆಷ್ಟು!
ಒಂದೇ ಸಿನೆಮಾದಲ್ಲಿ ನಾಲ್ಕಾರು
ಬಗೆ– ಇದು
ಅಂದರೆ ಅದರ ಹಿಂದಡಗಿ ಕೂತ
ಮತ್ತೆರಡು–
ಹತ್ಯೆ
ಮುಖ್ಯ ಹತ್ಯಾರಿನ ಪರಿವಿಲ್ಲ
ಅವನಿಗೆ, ಕತ್ತಲ ಥಿಯೇಟರಿಂದ
ಬೆಳಕಿಗೆ ಬಂದ ಪ್ರೇಕ್ಷಕ
ಕಿಸೆಯಲ್ಲಿ ಹತ್ಯಾರ ಇರಬಹುದೇ
ಎಂದು ತಡಕಬೇಕು!

ಲಾರ್ಸ್‌ನ್ ವಾನ್ ಟ್ರಯರನ ಸಿನಿಮಾ
ಒಂದರಲ್ಲಿ ಕಾಮಕೇಳಿಯ ಭರದಲ್ಲಿ ಕಣ್ಣಾರೆ
ಮಗು ಸಾಯುವುದನ್ನು ಕಂಡ ದಂಪತಿ
ದಾಂಪತ್ಯ ಕಳೆಯುವ ನೆತ್ತರ
ದಾರಿ ಹುಡುಕುವರು
ತನ್ನ ಕಾಪಡುವ ಹಿಂಸೆಗೆ
ಬೇಸತ್ತು
ಹಿಂಸೆ ಇರದ ಊರೆಂದು
ಬಂದ ಹೆಂಗಸು
ಅನುಭವಿಸಿ ಹಿಂಸೆ ಊರನ್ನೇ
ಸುಡಿಸುವಳು

ಸಿನಿಮಾ ನೋಡಲು
ಹೋಗಿ
ನೋಡುವ ನಮ್ಮ
ಒಳಗಿನ ಹತ್ಯಾರ
ಗಳು ಬಿಂಬದ ಕೋಲಾಗಿ
ಪರದೆಗೆ ಬಿದ್ದು
ಹಿಂಸೆಯ ಚಿತ್ರಗಳು
ಕಟ್ಟಿದರೆ
ಡೇವಿಡ್ ಲಿಂಚನ
ಸಿನಿಮಾ ಎಂದು
ಬೆಚ್ಚುವುದು ಹ್ಯಾಗೆ?!

ರಾಯ್ ಆ್ಯಂಡರ್ಸನ್ನನ ಸಿನಿಮಾ
ದಲ್ಲಿ ಪಾತ್ರ ಒಂದು ಗೆಳೆಯ ಸ್ಥಿತಿವಂತ
ಅಂತಾ ಭಾವಿಸಿ ತನ್ನ ಪಾಡನ್ನು
ದೂಷಿಸುವನು